


ಚಾಲಕನೇ ಇಲ್ಲದೆ ಕಾರು ಚಲಿಸುವಂತಿದ್ದರೆ..? ಸಂಚಾರದ ಯಾವ ನಿಯಮಗಳನ್ನೂ ಉಲ್ಲಂಘಿಸಿದೆ, ನಾವು ಹೋಗಬೇಕಾದೆಡೆಗೆ ಆ ಕಾರು ಸ್ವತಃ ತಾನೇ ಹೋಗುವಂತಿದ್ದರೆ..?

—ಇಂತಹ ಕಲ್ಪನೆ ನಿಜವಾದರೆ ಏನಾಗಬಹುದು?

ಅಂತಹದ್ದೊಂದು ಕಾರ್ ಇದ್ದಿದ್ದರೆ, ಬೆಳಿಗ್ಗೆ ಎದ್ದು ತರಾತುರಿಯಲ್ಲಿ ಕಚೇರಿಗೆ ಓಡುವಾಗ ಟ್ರಾಫಿಕ್‌ನ ಕಿರಿಕಿರಿ ಇರುವುದಿಲ್ಲ. ಡ್ರೈವರ್ ಬಂದಿಲ್ಲ ಎಂದು ತಲೆ ಕೆಡಿಸಿಕೊಳ್ಳಬೇಕಿಲ್ಲ. ಸಿಗ್ನಲ್ ಜಂಪ್ ಮಾಡಿಯೋ, ಓವರ್ ಸ್ಪೀಡ್‌ನಿಂದಾಗಿಯೋ ದಂಡ ಕಟ್ಟುವಂತಿಲ್ಲ. ಇಕ್ಕಟ್ಟಾದ ಜಾಗದಲ್ಲಿ ಪಾರ್ಕ್ ಮಾಡುವಾಗ ಹಿಂದು– ಮುಂದಿನ ಕಾರ್‌ಗಳಿಗೆ ಎಲ್ಲಿ ಟಚ್ ಆಗಿಬಿಡುತ್ತದೆಯೋ ಎಂದು ಗಾಬರಿ ಬೀಳಬೇಕಿಲ್ಲ. ಆಫೀಸ್ ಮುಟ್ಟುವವರೆಗೂ ಕಾರಿನಲ್ಲಿ ಆರಾಮಾಗಿ ಕೂತು ನಿದ್ದೆ ಮಾಡುವುದೋ, ತಿಂಡಿ ತಿನ್ನುವುದೋ ಅಥವಾ ಪುಸ್ತಕ ಓದುವುದೋ... ಹೀಗೆ ಯಾವುದಾದರೊಂದು ಕೆಲಸವನ್ನು ಆರಾಮವಾಗಿ ಮಾಡಬಹುದು. ಏನೆಲ್ಲಾ ಮಾಡಬಹುದು ಎಂಬುದನ್ನು ಪಟ್ಟಿ ಮಾಡುತ್ತಾ ಹೋದರೆ ಅದು ಹನುಮಂತನ ಬಾಲವೇ ಆಗುತ್ತದೆ.

ಎಲ್ಲ ಸರಿ, ಮುಂದೊಂದು ದಿನ ಅಂತಹ ಕಾರ್ ಮಾರುಕಟ್ಟೆಗೆ ಬರಬಹುದೇ?

ಇದು 'ಆಟೊಮ್ಯಾಟಿಕ್' ಕಾಲ. ಗ್ಯಾಸ್ ಸ್ಟೌನ ಇಗ್ನೈಟರ್, ವಾಟರ್ ಟ್ಯಾಂಕ್‌ನ ಪಂಪ್, ವಾಟರ್ ಹೀಟರ್, ನೀರಿನ ಫಿಲ್ಟರ್, ಮನೆಯ ಏ.ಸಿ., ಟಿ.ವಿ, ಎಲ್ಲದಕ್ಕೂ ಟೈಮರ್ ಹೊಂದಿಸಿ ಬಿಟ್ಟರೆ ಎಲ್ಲವೂ ಸ್ವಯಂಚಾಲಿತವಾಗಿ ತಮ್ಮ ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತವೆ. ಹೀಗೆ ಮನೆಯ ಬಚ್ಚಲುಮನೆಯಿಂದ ಕಚೇರಿಯ ಕಂಪ್ಯೂಟರ್ ಟೇಬಲ್‌ವರೆಗೂ ಆಟೊಮ್ಯಾಟಿಕ್ ಎಂಬುದು ನಮ್ಮ ದೈನಂದಿನ ಜೀವನದ ಭಾಗವೇ ಆಗಿದೆ. ಹೀಗಿದ್ದ ಮೇಲೆ ಕಾರ್‌ಗಳೇಕೆ ಆಟೊಮ್ಯಾಟಿಕ್ ಆಗಿರಬಾರದು?

'ನಮ್ಮ ಕಾರ್ ಈಗಾಗಲೇ ಆಟೊಮ್ಯಾಟಿಕ್' ಎಂದು ಕಾಲರ್ ಎತ್ತಬೇಡಿ. ಸದ್ಯಕ್ಕೆ ನೀವು ಹೇಳುತ್ತಿರುವ ನಿಮ್ಮ ಕಾರಿನಲ್ಲಿರುವುದು ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಮಾತ್ರ.

ಈ ಮೊದಲೇ ಹೇಳಿದಂತೆ, 'ಕಾರುಗಳೇಕೆ ಆಟೊಮ್ಯಾಟಿಕ್ ಆಗಿರಬಾರದು?' ಎಂಬ ಹುಳು ಬಹಳ ಹಿಂದೆಯೇ ಆಟೊ– ಎಂಜಿನಿಯರ್‌ಗಳ ತಲೆಯನ್ನೂ ಹೊಕ್ಕಿದೆ. ಹೀಗಾಗಿ ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳಬಹುದಾದ ಕಾರುಗಳು ಈಗ ನಮ್ಮ ರಸ್ತೆಗೆ ಇಳಿಯುತ್ತಿವೆ. ಅಂತಹ ಕಾರುಗಳಲ್ಲಿರುವ ಸ್ವಯಂಚಾಲಿತ ಚಾಲನಾ ವ್ಯವಸ್ಥೆಯನ್ನು ಆಟೊಪೈಲಟ್ ಮತ್ತು